ಆಗಿಸಿಕೊಳ್ಳುವಂಥದು! ದೆಹಲಿಯಲ್ಲಿ ಇಂತಹ ಏಕಾಂತವನ್ನು ನಾನಾಗಿಯೇ ಕಲ್ಪಿಸುವೆನಷ್ಟೆ? ಆಕಾಶದ ದೇವರುಗಳನ್ನೆಲ್ಲ ಬದಿಸರಿಸಿ, ಸತ್ಯ–ಧರ್ಮ–ನ್ಯಾಯಾದಿ ಅಧಿದೇವತೆಗಳನ್ನೂ ಅವಗಣಿಸಿ ಬರೇ ನಮ್ಮದಾದ ಅವಕಾಶವನ್ನು ಸೃಷ್ಟಿಸುವೆ... ಒಳವುಡುಪಿನ ಅಡಚಣೆಯೂ ಇಲ್ಲವಾಗಿಸಿ ಇವಳನ್ನು ವಿಮೋಚಿಸಿಬಿಡುವೆ. ಇವಳೂ ಅಷ್ಟೆ, ನನ್ನನ್ನು ಸರ್ವತಂತ್ರವಾಗಿ ಸ್ವತಂತ್ರಿಸಿಬಿಡುವಳು.

ಅಷ್ಟರಲ್ಲಿ ಫೋನು ರಿಂಗಾಯಿತು.

ಇಬ್ಬರದೂ ಒಂದೇ ಬಗೆಯ ಫೋನು. ಒಟ್ಟೇ ಕೊಂಡಿದ್ದು. ನಾನೇ ಗಿಫ್ಟು ಕೊಟ್ಟಿದ್ದು. ಐಫೋನು... ಒಂದೇ ರಿಂಗ್‌ಟೋನ್ ಕೂಡ...

ಫೋನು ರಿಂಗಾದಾಗ ನನ್ನದೋ, ಅವಳದೋ ಎಂಬ ಗೊಂದಲವುಂಟಾಯಿತು.

ಅಲ್ಲದೆ, ಹೀಗೊಂದು ಫೋನು ಬಂದಿದ್ದು ಒಳ್ಳೆಯದೇ ಆಯಿತು... ಥಕ್ಕನೆ ನನ್ನಿಂದ ಮೈತೆಗೆದಳು. ಮೈ ಹಗುರಾದ ಸಮಾಧಾನದ ನಡುವೆಯೇ, 'ಈಸ್ ಇಟ್ ಯುವರ್ಸ್, ಆರ್ ಮೈನ್?' ಎಂದು ಗೊಂದಲವನ್ನು ಮಾತಿನಲ್ಲಿ ಕೇಳಿದೆ. ತನ್ನದೇ ಎಂದು ನಕ್ಕು ಹೆಕ್ಕಿಕೊಂಡಳು.

ಆದ್ರಾ ಫೋನಿನಲ್ಲಿಳಿಯುವಾಗ, ನಾನು ಅವಳೆದುರಿನ ಕುರ್ಚಿಯಲ್ಲಿ ಮೈಚೆಲ್ಲಿದೆ. ಫೋನಿನ ಆಚೆಬದಿಯಲ್ಲಿರುವುದು ಯಾರು ಏನು ಎತ್ತ... ಎಂದು ನೇರ ಗೊತ್ತಾಗದಿದ್ದರೂ, ಅವಳ ಮಾತುಗಳಿಂದಲೇ ವಿಷಯವೇನೆಂದು ತಿಳಿದುಬಂತು. ಮಾತಿನ ನಡುವೆ ಅನೋಮ ಎಂಬ ಶಬ್ದ ಎರಡು ಮೂರು ಸರ್ತಿ ಅನುರಣಿಸಿತು. ಅದು ಯಾರದೋ ಹೆಸರೆಂದು ಬಳಿಕ ತಿಳಿದುಬಂತು. ಗಂಡೋ, ಹೆಣ್ಣೋ ಗೊತ್ತಾಗಲಿಲ್ಲ... ಆದ್ರಾ, ಆ ವ್ಯಕ್ತಿಗೆ ಹೋಟೆಲಿಗೆ ಬರಹೇಳುತ್ತಿದ್ದಳು. ಹೋಟೆಲಿನಲ್ಲಿ ಎಲ್ಲಿ, ಎಷ್ಟು ಹೊತ್ತಿಗೆ... ಸಿಗುವುದೆಂಬ ನಿಷ್ಕರ್ಷೆ ಜರುಗಿತ್ತು. 'ಕಮ್ ಬೈ ಫೋರ್–ಫೋರ್ ಥರ್ಟೀ, ಅನೋಮಾ ಇದ್ದೀನಿ ಇದ್ದೀನಿ ಇಲ್ಲೇ ಇರುತೀನಿ... ಬರುವ ಸುಮಾರಿಗೆ ಯಾತಕ್ಕೂ ಫೋನ್ ಮಾಡು... ಅವನನ್ನೂ ಕರಕೊಂಡು ಬಾ... ಗ್ರೇಟ್ ಸೀ ಯೂ ಸೂನ್...'

ನಾನು ಒಡನಿರುವಾಗಲೇ ಆ ಇನ್ನೊಬ್ಬರಿಗೂ ಬರಹೇಳಿದ್ದು ಇರುಸುಮುರುಸು ಉಂಟುಮಾಡಿತು. 'ಅರ್ರೆ ರೇ ನಾನಿಲ್ಲೇ ಇದ್ದೀನಿ. ಆಗಲೇ ಈ ವ್ಯಕ್ತಿಗೂ ಬರಹೇಳಿದೆಯಲ್ಲ...' ಸಣ್ಣಗೆ ತಗಾದೆ ತೆಗೆದೆ.

'ಓಹ್ ಸಾಹೇಬರು ಮುನಿಯುತ್ತಿದ್ದಾರೆ...' ನಾಟಕೀಯವಾಗಿ ಹೇಳಿದಳು. 'ನೀವೇ ಅಲ್ಲವಾ, ಅರ್ಧ ಗಂಟೆ ಮಾತ್ರ ಇರೋದು ಅಂತ...'

'ಸೋ?... ಅದಕ್ಕೆ ನಾನಿರೋವಾಗಲೇ ಆ ಇನ್ನೊಬ್ಬ ವ್ಯಕ್ತಿಯೂ ಬರಬೇಕೇನು?'

'ಇಲ್ಲ, ಅಭೀ ಅದು ಹಾಗಲ್ಲ. ಅನೋಮಾ ಅಂತ, ನನ್ನಣ್ಣನ ಗೆಳೆಯನ ಮಗಳು... ಇಲ್ಲೇ ಇದ್ದಾಳೆ. ಐಐಎಸ್ಸಿಯಲ್ಲಿ ಮಾಸ್ಟರ್ಸ್ ಓದುತಿದ್ದಾಳೆ... ಐದಾರು ವರ್ಷ ಆದವು, ಇಬ್ಬರೂ ಸಿಕ್ಕಿ... ಸರಿ, ಟೈಮಿದೆಯಲ್ಲಾ ಭೇಟಿ ಮಾಡೋಣ ಅಂತ... ಈಗಲೂ ಹೇಳು, ನೀನು ಉಳಿದ ಸಂಜೆಯನ್ನು ನನ್ನೊಡನೆ ಕಳೆಯುವೀ ಅಂತ. ಬರೋದು ಬೇಡ ಅನ್ನುತೀನಿ...'

'ಛೇ ಛೇ... ಅದು ಹಾಗಲ್ಲ... ಅಲ್ಲಾ, ಜೊತೆಗೆ ಇನ್ನು ಯಾರನ್ನೋ ಕರಕೊಂಡು ಬಾ ಅಂತಲೂ ಹೇಳಿದೆಯಲ್ಲ?'

'ಅವಳ ಫ್ರೆಂಡ್ ಅಂತೆ...' ಅಂದು ನಕ್ಕು, ಹಿಂದೆಯೇ – 'ಬಾಯ್‌ಫ್ರೆಂಡ್!!' ಅನ್ನುತ್ತ ಮಾತು ತಿದ್ದಿ ಕಣ್ಣು ಹೊಡೆದಳು.